REVISED

ಕರ್ನಾಟಕ ಸರ್ಕಾರ

ಪದವಿ ಪೂರ್ವ ಶಿಕ್ಷಣ ಇಲಾಖೆ

ಉಪ ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-12.

E-mail-ddan.pue@gmail.com Ph:08023446475

ಸಂಖ್ಯೆ : ಪಪೂಶಿಇ/ಉನಿ/ಬೆಂಉ/ಪ್ರ.ಪಿ.ಪೂ.ಪ/2022-23 ದಿನಾಂಕ: 03-04-2023

# ಜ್ಞಾಪನ

ವಿಷಯ: 2022-23ನೇ ಸಾಲಿನ ಪ್ರಥಮ ಪಿಯುಸಿ ಪೂರಕ ಪರೀಕ್ಷೆ ನಡೆಸುವ ಮತ್ತು ಫಲಿತಾಂಶ ಅನುಮೋದನೆ ಮಾಡುವ ಬಗ್ಗೆ.

ಉಲ್ಲೇಖ: ಈ ಕಚೇರಿ ಸುತ್ತೋಲೆ ಸಂಖ್ಯೆ: ಪಪೂಶಿಇ/ಪಿಪಿ/ಪ್ರ.ಪಿ.ಪೂ.ಪ/ 2022-23/ 1388 ದಿನಾಂಕ: 30-03-2023

*******

2022-23ನೇ ಸಾಲಿನ ಮೇ ತಿಂಗಳನಲ್ಲಿ ನಡೆಸುತ್ತಿರುವ ಪ್ರಥಮ ಪಿಯುಸಿ ಪೂರಕ ಪರೀಕ್ಷೆಯನ್ನು ನಡೆಸುವ ಮತ್ತು ಫಲಿತಾಂಶವನ್ನು ಅನುಮೋದಿಸುವ ಕುರಿತು ಉಲ್ಲೇಖ ಪತ್ರದಲ್ಲಿ ಈಗಾಗಲೇ ನೀಡಿರುವ ಎಲ್ಲಾ ಸೂಚನೆಗಳನ್ನು ಈ ಪರೀಕ್ಷೆಗೂ ಅನ್ವಯಿಸಿಕೊಳ್ಳುವುದು. ಪೂರಕ ಪರೀಕ್ಷೆಯನ್ನು ದಿನಾಂಕ: 28-04-2023 ರಿಂದ ದಿನಾಂಕ: 10-05-2023 ರವರೆಗೆ ಇಲಾಖೆ ಪ್ರಕಟಿಸಿರುವ ವೇಳಾಪಟ್ಟಿಯ ಪ್ರಕಾರ ನಡೆಸುವಂತೆ ಸೂಚಿಸಿದೆ.

ಸದರಿ ಪೂರಕ ಪರೀಕ್ಷೆಗೆ ಅನುತ್ತೀರ್ಣ ವಿದ್ಯಾರ್ಥಿಗಳು ಪೂರಕ ಪರೀಕ್ಷೆಗೆ ಶುಲ್ಕ ಪಾವತಿಸಲು ಕೊನೆಯ ದಿನಾಂಕ: 15-04-2023 ಆಗಿರುತ್ತದೆ. ಪರೀಕ್ಷಾ ಶುಲ್ಕವನ್ನು ಕೆಳಗೆ ತಿಳಿಸಲಾದ ದರದಂತೆ ಪಡೆಯುವುದು.

**ಪರೀಕ್ಷಾ ಶುಲ್ಕದ ವಿವರ:**

| | |
|---|---|
| ಒಂದು ವಿಷಯಕ್ಕೆ | 140=00 |
| ಎರಡು ವಿಷಯಕ್ಕೆ | 270=00 |
| ಮೂರು ಮತ್ತು ಹೆಚ್ಚಿನ ವಿಷಯಕ್ಕೆ | 400=00 |

ಪೂರಕ ಪರೀಕ್ಷೆಯ ಫಲಿತಾಂಶವನ್ನು ದಿನಾಂಕ: 17-05-2023ರೊಳಗೆ ಜಿಲ್ಲಾ ಉಪನಿರ್ದೇಶಕರ ಅನುಮೋದನೆ ಪಡೆದು ಕಾಲೇಜುಗಳಲ್ಲಿ ದಿನಾಂಕ: 22-05-2023 ರಂದು ಬೆಳಗ್ಗೆ 11.00 ಗಂಟೆಗೆ ಪ್ರಕಟಿಸುವುದು. ಹಾಗೂ ಪ್ರಶ್ನೆ ಪತ್ರಿಕೆಗಳ ಇಂಡೆಂಟನ್ನು ದಿನಾಂಕ: 18-04-2023 ರೊಳಗಾಗಿ ಆಯಾಯ ನೋಡಲ್ ಕೇಂದ್ರಗಳಗೆ ಸಲ್ಲಿಸುವುದು.

**ಫಲಿತಾಂಶ ಅನುಮೋದನೆಗಾಗಿ ಕಾಲೇಜಿನವರು ಕಡ್ಡಾಯವಾಗಿ ಸಲ್ಲಿಸಬೇಕಾಗಿರುವ ದಾಖಲೆಗಳು:**

1. ಸಿ ಎಂ ಆರ್ (Consolidates Marks Register) ವಹಿಯಲ್ಲಿ ಘೋಷ್ವಾರೆ ಸಹಿತ ಫಲಿತಾಂಸವನ್ನು ಸಲ್ಲಿಸಿ ಅನುಮೋದನೆ ಮಾಡಿಸಬೇಕು.
2. SATS Portal Upload Printout –ತ್ರಿಪ್ರತಿಯಲ್ಲಿ (A-3 Size)
3. ಹಿಂದಿನ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವ ವಿಷಯಗಳ ಅಂಕಗಳಿಗೆ ಸ್ಟಾರ್ ಮಾರ್ಕ್ ಹಾಕಿರಬೇಕು

**ಈ ಕೆಳಕಂಡಂತೆ ಕ್ರೋಢೀಕರಿಸಿ ಅಂಕವಹಿಯ ಕೊನೆಯ ಪುಟದಲ್ಲಿ ಘೋಷ್ವಾರೆ ಹಾಕಿ ದೃಢೀಕರಿಸಬೇಕು.**

| ಒಟ್ಟು ಹಾಜರಾದವರ ಸಂಖ್ಯೆ | | ಉತ್ತೀರ್ಣರಾದವರ ಸಂಖ್ಯೆ | ಅನುತ್ತೀರ್ಣರಾದವರ ಸಂಖ್ಯೆ | ಶೇಕಡವಾರು ಫಲಿತಾಂಶ |
|---|---|---|---|---|
| ಕಲಾ | | | | |
| ವಾಣಿಜ್ಯ | | | | |
| ವಿಜ್ಞಾನ | | | | |
| ಒಟ್ಟು | | | | |